**ಅಸಲು ದಾವ ಸಂಖ್ಯೆ: 688/2025**
**ಪಿ.ಡಬ್ಲೂ -1**

**ದಿಃ 11-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು 1, 2, 5 ರಿಂದ 7ನೇ ಪ್ರತಿವಾದಿ ಪರ ವಕೀಲರಾದ ಮಾನ್ಯ ಡಿಜಿಪಿ ರವರಿಂದಃ-**

1. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಸ್ ಎಸ್ ಎಲ್ ಸಿ ನ್ನು 1998 ರಲ್ಲಿ ಮುಗಿಸಿರುತ್ತೇನೆ. ನಾನು 2007 ನೇ ಇಸವಿಯಲ್ಲಿ ನೌಕರಿಗೆ ಸೇರಿರುತ್ತೇನೆ. ನಾನು ನೌಕರಿಗೆ ಸೇರುವಾಗ ನನ್ನ ಶಾಲಾ ವರ್ಗಾವಣೆ ಪ್ರಮಾಣ ಪತ್ರ, ಆಧಾರ ಕಾರ್ಡ ಹಾಗೂ ಎಸ್ ಎಸ್ ಎಲ್ ಸಿ ಅಂಕಪಟ್ಟಿಯನ್ನು ಸಲ್ಲಿಸಿರುತ್ತೇನೆ. ನೌಕರಿಗೆ ಸೇರುವ ಸಮಯದಲ್ಲಿ ನನ್ನ ಅಡ್ಡಹೆಸರು ಅಗಸಗಿ ಹಾಗೂ ಸಿದ್ದಗೌಡರ ಎಂದು ಇರುವ ದಾಖಲೆಗಳನ್ನು ಸಲ್ಲಿಸಿದ್ದೆ. 2007 ನೇ ಇಸವಿಯಲ್ಲಿ ನನ್ನ ಬಳಿ ಇದ್ದ ಆಧಾರ ಕಾರ್ಡನ್ನು ಅಗಸಗಿ ಹಾಗೂ ಸಿದ್ದಗೌಡರ ಎಂಬ ಎರಡೂ ಅಡ್ಡ ಹೆಸರುಗಳು ನಮೂದು ಇದ್ದವು. ನಾನು ಕೆಲಸಕ್ಕೆ ಸೇರುವಾಗ ನಾನು ಸಲ್ಲಿಸಿದ ದಾಖಲೆಗಳೆಲ್ಲ ಸರಿಯಿರುತ್ತವೆ ಎಂದು ನಾನು ಪ್ರಮಾಣಪತ್ರ ಬರೆದುಕೊಟ್ಟಿರುವುದಿಲ್ಲ. ನಾನು ನೌಕರಿಗೆ ಸೇರುವ ಸಮಯದಲ್ಲಿ ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಅಡ್ಡಹೆಸರು ಸಿದ್ದಗೌಡರ ಎಂದು ನಮೂದು ಆಗಿರುವ ಬಗ್ಗೆ ನನಗೆ ತಿಳಿದಿತ್ತು.

2. ನನ್ನ ತಂದೆ ಅನಕ್ಷರಸ್ಥರಾಗಿರುತ್ತಾರೆ. ನನ್ನ ತಂದೆಯ ಅಡ್ಡಹೆಸರು ಅಗಸಗಿ ಆಗಿರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಡ್ಡಹೆಸರು ಅಗಸಗಿ ಆಗಬೇಕು ಎಂದು ಶಾಲೆಯವರಿಗೆ ಅರ್ಜಿ ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತಾನು ಅರ್ಜಿ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಈಗ ನನ್ನ ಅಡ್ಡಹೆಸರು ತಿದ್ದುಪಡಿ ಮಾಡಲು ಕಾರಣವೆಂದರೆ ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಉಂಟಾಗುತ್ತಿದೆ. ನನ್ನ ಮಕ್ಕಳ

ಶಾಲಾ ದಾಖಲಾತಿಗಳಲ್ಲಿ ಅಡ್ಡಹೆಸರು ಅಗಸಗಿ ಎಂದು ನಮೂದಾಗಿರುತ್ತದೆ. ನನ್ನ ಅಡ್ಡಹೆಸರು ಸಿದ್ದಗೌಡರ ಆಗಿದ್ದರೂ ಸಹ ನನ್ನ ಮಕ್ಕಳ ಶಾಲಾ ದಾಖಲಾತಿಗಳಲ್ಲಿ ಅಗಸಗಿ ಎಂದು ನಾನೇ ತಪ್ಪು ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಕ್ಕಳ ಶಾಲಾ ದಾಖಲಾತಿಗಳಲ್ಲಿ ಅವರ ಅಡ್ಡಹೆಸರು ಅಗಸಗಿ ಆಗಿರುತ್ತದೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಬೆಳಗಾವಿ ಹಾಗೂ ಚಿಕ್ಕೋಡಿಯ ಕೆ ಎಸ್ ಆರ್ ಟಿ ಸಿ ವಿಭಾಗದಲ್ಲಿ ಎಷ್ಟು ಜನ ಅಗಸಗಿ ಎಂಬ ಅಡ್ಡಹೆಸರಿನವರು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ಕಾರದ ಸವಲತ್ತುಗಳನ್ನು ಪಡೆಯಲು ನಾನು ನನ್ನ ಮನೆತನದ ಹೆಸರನ್ನು ಅಗಸಗಿ ಎಂದು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿರುವೆನು ಎಂದರೆ ಸರಿಯಲ್ಲ. ಶಾಲೆಯವರದ್ದು ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(4ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದ ಕಾರಣ ಅವರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**